**ಸಕಲೇಶಪುರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವ ನ್ಯಾಯಾಲಯದಲ್ಲಿ**

**ಸಿ.ಸಿ. ನಂ. 275/2025**

| | | |
|---|---|---|
| ಸಾಕ್ಷಿದಾರರ ಹೆಸರು | ಮೊಹಮ್ಮದ್ ಷರೀಫ್ | P.W-1 |
| ತಂದೆಯ / ಗಂಡನ ಹೆಸರು | ಅಬ್ಬಾಸ್ | C.W-1 |
| ವಯಸ್ಸು | 46 ವರ್ಷ | |
| ಉದ್ಯೋಗ | ವ್ಯಾಪಾರ | |
| ವಾಸ ಸ್ಥಳ | ತೆಕ್ಕಾರು, ಬೆಳ್ತಂಗಡಿ ತಾಲ್ಲೂಕು. | ದಿನಾಂಕ 03-06-2026 |

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ**

ದಿಃ 29-03-2025 ರಂದು ನಾನು ಬೆಂಗಳೂರಿನಿಂದ 10.00 ಗಂಟೆಗೆ ಕಾರಿನಲ್ಲಿ ಹೊರಟಿದ್ದು, ದಿಃ 30-03-2025 ರ ಬೆಳಗಿನ ಜಾವ 4.00 ಗಂಟೆ ಸಮಯದಲ್ಲಿ ದೋಣಿಗಾಲ್ ಸಮೀಪ ಒಂದು ಲಾರಿ ಪಲ್ಟಿಯಾಗಿದ್ದು, ರಸ್ತೆಯು ಬ್ಲಾಕ್ ಆಗಿತ್ತು. ನಾನು ಸದರಿ ಸಮಯದಲ್ಲಿ ಯಾವ ಕಾರಣಕ್ಕಾಗಿ ರಸ್ತೆ ಬ್ಲಾಕ್ ಆಗಿರುತ್ತದೆ ಎಂದು ನೋಡಲು ಕಾರಿನಿಂದ ಇಳಿದು ನೋಡುತ್ತಿದ್ದಾಗ, ಬೆಂಗಳೂರು ಕಡೆಯಿಂದ ಗ್ರೀನ್ ಲೈನ್ ಎಂಬ ಹೆಸರಿನ ಕೆ ಎ 51 ಎಫ್ 3115 ಬಸ್ಸು ಬಂದಿದ್ದು, ಸದರಿ ಬಸ್ಸಿನ ಚಾಲಕನು ನನ್ನನ್ನು ಉದ್ದೇಶಿಸಿ ಸೂಳೆ ಮಗನೆ, ನಿನ್ನ ಅಮ್ಮನ್, ನಿನ್ನ ಅಕ್ಕನ್ ಎಂದು ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ. ಯಾವ ಕಾರಣಕ್ಕಾಗಿ ನನಗೆ ಬೈಯುತ್ತಿರುತ್ತೀಯಾ ಎಂದು ನಾನು ಆತನ ಬಳಿ ಕೇಳಿದಾಗ, ಆತನು ನನಗೆ ಕೈಯಿಂದ ಹೊಡೆದಿರುತ್ತಾನೆ. ಆ ಸಮಯದಲ್ಲಿ ಚಾಸಾ 2 ರವರು ಜಗಳ ಬಿಡಿಸಲು ಬಂದಿದ್ದು, ಆಗ ಇನ್ನೊಬ್ಬ ವ್ಯಕ್ತಿಯು ಕಬ್ಬಿಣದ ರಾಡಿನಿಂದ ಚಾಸಾ 2 ರವರಿಗೆ ಹೊಡೆದಿರುತ್ತಾನೆ. ನಂತರ ನಾನು ಚಾಸಾ 2 ರವರನ್ನು ಚಿಕಿತ್ಸೆಗಾಗಿ ಪುತ್ತೂರಿನ ಪ್ರಗತಿ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ಸದರಿ ದಿನ ರಂಜಾನ್ ಹಬ್ಬ ಇದ್ದುದರಿಂದ ನಾನು ದಿಃ 01-04-2025 ರಂದು ಸಕಲೇಶಪುರ

ನಗರ ಠಾಣೆಗೆ ಬಂದು ದೂರು ನೀಡಿರುತ್ತೇನೆ. ದೂರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದೂರನ್ನು ನಿ.ಪಿ. 1 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 1ಎ ಎಂದು ಗುರುತಿಸಲಾಯಿತು.

ಈಗ ನನಗೆ ತೋರಿಸಿದ ಮಹಜರ್ ನಲ್ಲಿರುವ ಸಹಿ ನನ್ನದೇ ಇರುತ್ತದೆ ಮಹಜರನ್ನು ಸಾಕ್ಷಿ ನೋಡಿ ಗುರುತಿಸಿದ್ದು ಸದರಿ ದೂರನ್ನು ನಿ.ಪಿ. 2 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 2ಎ ಎಂದು ಗುರುತಿಸಲಾಯಿತು. ನಿ.ಪಿ 2 ದಾಖಲೆಗೆ ನಾನು ಸಕಲೇಶಪುರ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ನಿ.ಪಿ 2 ದಾಖಲೆಯಲ್ಲಿ ಏನು ಬರೆದಿರುತ್ತದೆ ಎಂದು ನಾನು ತಿಳಿದುಕೊಂಡಿರುತ್ತೇನೆ. ಈಗ ನನಗೆ ತೋರಿಸಿದ ಛಾಯಾಚಿತ್ರದಲ್ಲಿ ನಾನು ಹಾಜರಿರುತ್ತೇನೆ. ಸದರಿ ಛಾಯಾಚಿತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 3 ಎಂದು ಗುರುತಿಸಲಾಯಿತು. ಸದರಿ ಛಾಯಾಚಿತ್ರವನ್ನು ತಕ್ಷೀರು ಸ್ಥಳದಲ್ಲಿ ತೆಗೆದಿರುತ್ತಾರೆ. ನನಗೆ ಮತ್ತು ಚಾಸಾ 2 ರವರಿಗೆ ಹಲ್ಲೆ ಮಾಡಿದ ಆರೋಪಿತರನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತೇನೆ.

(ಈ ಹಂತದಲ್ಲಿ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಗಿದೆ.)

**ಪಾಟೀ ಸವಾಲುಃ ಮಾನ್ಯ ಸ.ಸ.ಅ ರವರಿಂದಃ-**

ಆರೋಪಿತರ ಹಲ್ಲೆಯಿಂದ ಚಾಸಾ 2 ರವರಿಗೆ ರಕ್ತಗಾಯವಾಗಿರುತ್ತದೆ ಎಂದರೆ ಸರಿ. ಆರೋಪಿತರ ಹಲ್ಲೆಯಿಂದ ನನಗೂ ಮೈಕೈಗೆ ನೋವುಂಟಾಗಿರುತ್ತದೆ ಎಂದರೆ ಸರಿ. ದಿಃ 01-04-2025 ರಂದು ಪೊಲೀಸರು ತಕ್ಷೀರು ಸ್ಥಳದಲ್ಲಿ ಮಹಜರ್ ಮಾಡಿರುತ್ತಾರೆ ಎಂದರೆ ಸರಿ. ಸದರಿ ಮಹಜರನ್ನು ಮಧ್ಯಾಹ್ನ 2.30 ರಿಂದ 3.00 ಗಂಟೆಯವರೆಗೆ ಬರೆದಿರುತ್ತಾರೆ ಎಂದರೆ ಸರಿ. ಮಹಜರ್ ಕಾಲದಲ್ಲಿ ಚಾಸಾ 3 ಮತ್ತು 4 ರವರು ಹಾಜರಿದ್ದರು ಎಂದರೆ ಸರಿ. ನಿ.ಪಿ 2 ಮಹಜರ್ ಗೆ ನಾನು ತಕ್ಷೀರು ಸ್ಥಳದಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿ. ನಿ.ಪಿ 2 ರಲ್ಲಿ ಬರೆದಿರುವ ಎಲ್ಲಾವಿಚಾರಗಳನ್ನು ತಿಳಿದುಕೊಂಡೇ ಸಹಿ ಮಾಡಿರುತ್ತೇನೆ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿತರ ಪರ ಶ್ರೀ ವೈ ಕೆ ವಕೀಲರಿಂದ**

ನಾನು 5 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತೇನೆ. ನನ್ನ ತಮ್ಮ 8 ವರ್ಷಗಳಿಂದ ಬೆಂಗಳೂರಿನಲ್ಲಿ ವಾಸವಾಗಿರುತ್ತಾನೆ. ನಾನು ಮತ್ತು ನನ್ನ ತಮ್ಮ ಘಟನೆಯಾಗಿದೆ ಎಂದು ಹೇಳಿದ ದಿನ ಒಂದೇ ಕಾರಿನಲ್ಲಿ ಬಂದಿರುತ್ತೇವೆ. ಸದರಿ ಕಾರು ಹುಂಡೈ ಅಕ್ಸೆಂಟ್ ಕಾರು ಅದರ ನೋಂದಣಿ ನಂ. ಕೆ.ಎ 51 ಎ.ಬಿ 9408 ಆಗಿರುತ್ತದೆ. ಸದರಿ ಕಾರು ನನ್ನ ಮಾಲೀಕತ್ವದ ಟೂರಿಸ್ಟ್ ಕಾರು ಆಗಿರುತ್ತದೆ. ಸದರಿ ಕಾರಿನಲ್ಲಿ ಸದರಿ ದಿನ ನಾನು ಮತ್ತು ಚಾಸಾ 2 ರವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಕೆ.ಎ 70 -8921 ನಂಬರಿನ ಸ್ವಿಫ್ಟ್ ಕಾರು ಯಾರ ಕಾರು ಎಂದು ನನಗೆ ಗೊತ್ತಿಲ್ಲ. ಸದರಿ ಕಾರಿನಲ್ಲಿದ್ದವರು ಉಪ್ಪಿನಂಗಡಿಯವರಾಗಿದ್ದು ನನಗೆ ಸಹಾಯ ಮಾಡಲು ಬಂದಿರುತ್ತಾರೆ. ಸದರಿ ಸ್ವಿಫ್ಟ್ ಕಾರಿನಲ್ಲಿ ನಾನು, ನನ್ನ ತಮ್ಮ ಮತ್ತು ಇಬ್ಬರು ಇದ್ದರು ಅವರು ಯಾರು ಎಂದು ನನಗೆ ಗೊತ್ತಿಲ್ಲ. ಸ್ವಿಫ್ಟ್ ಡಿಸೈರ್ ಕಾರು ಕೆ ಎ 21 ಬಿ 9645 ಯಾರ ಕಾರು ಎಂದು ನನಗೆ ಗೊತ್ತಿಲ್ಲ, ಆದರೆ ಅವರು ನನಗೆ ಸಹಾಯ ಮಾಡಲು ಬಂದಿರುತ್ತಾರೆ. ಮೇಲೆ ಹೇಳಿದ ನನಗೆ ಸಹಾಯ ಮಾಡಲು ಬಂದ ಎರಡೂ ಕಾರಿನಲ್ಲಿದ್ದ ಜನರ ಹೆಸರು ವಿಳಾಸವನ್ನು ನಾನು ತಿಳಿದುಕೊಂಡಿರುವುದಿಲ್ಲ. ನನಗೆ ಸದರಿ ಕಾರಿನ ಜನರು ಗುಂಡ್ಯದಿಂದ ಉಪ್ಪಿನಂಗಡಿ ಸಮೀಪದ ಮಠದವರೆಗೆ ಸಹಾಯ ಮಾಡಿರುತ್ತಾರೆ. ದೋಣಿಗಾಲ್ ನಿಂದ ಗುಂಡ್ಯಕ್ಕೆ ಸುಮಾರು 31 ಕಿ ಮಿ ಅಂತರವಿರುತ್ತದೆ ಎಂದರೆ ಸರಿ. ಘಟನೆಯಾಗಿದೆ ಎಂದು ಹೇಳಿದ ಸ್ಥಳಕ್ಕೆ ಸದರಿ ಮೇಲೆ ಹೇಳಿದ ಎರಡು ಸ್ವಿಫ್ಟ್ ಡಿಸೈರ್ ಕಾರುಗಳು ಬಂದಿರುವುದಿಲ್ಲ. ನಾನು ದೂರು ನೀಡುವಾಗ ನನ್ನ ಕಾರಿನ ನೋಂದಣಿ ಸಂಖ್ಯೆಯನ್ನು ನಮೂದು ಮಾಡಿರುವುದಿಲ್ಲ. ಲಾರಿ ಪಲ್ಟಿಯಾಗಿರುವ ಜಾಗಕ್ಕೂ ರಸ್ತೆ ಬ್ಲಾಕ್ ಆಗಿ ನಾನು ನಿಂತಿದ್ದ ಜಾಗಕ್ಕೂ ಸುಮಾರು ಅರ್ಧ ಕಿ.ಮಿ ಅಂತರವಿತ್ತು. ಸದರಿ ಅಪಘಾತದಿಂದ ಎಷ್ಟು ದೂರದವರೆಗೆ ರಸ್ತೆ ಬ್ಲಾಕ್ ಆಗಿತ್ತು ಎಂದು ನನಗೆ ಗೊತ್ತಿಲ್ಲ. ಗಲಾಟೆಯಾಗಿದೆ ಎಂದು ಹೇಳಿದ ಸಮಯದಲ್ಲಿ ಒಂದೇ ರಸ್ತೆಯಲ್ಲಿ ಎರಡೂ ಕಡೆಯ ವಾಹನಗಳು ಚಲಿಸುತ್ತದ್ದವು. ಸದರಿ ದಿನ ಲಾರಿ ಅಪಘಾತ ಆಗಿದ್ದರಿಂದ ಎರಡೂ ಕಡೆಯ ವಾಹನಗಳು ರಸ್ತೆಯಲ್ಲಿ ಬ್ಲಾಕ್ ಆಗಿದ್ದವು. ನನ್ನ ವಾಹನದ ಹಿಂಭಾಗದಲ್ಲಿ ಸುಮಾರು 20 ವಾಹನಗಳು ಬ್ಲಾಕ್ ಆಗಿ ನಿಂತಿದ್ದವು. ಸುಮಾರು 15 ನಿಮಿಷಗಳಲ್ಲಿ ರಸ್ತೆ

ತೆರವುಗೊಂಡಿರುತ್ತದೆ. ಬೆಳಗಿನ ಜಾವ 4.20 ಗಂಟೆಗೆ ನಾವು ತಕ್ಷೀರು ಸ್ಥಳದಿಂದ ಹೊರಟಿರುತ್ತೇವೆ. ಆ ಸಮಯದಲ್ಲಿ ಯಾವುದೇ ಪೊಲೀಸರು ಇರಲಿಲ್ಲ. ಆರೋಪಿತರು 10 ನಿಮಿಷಗಳ ಕಾಲ ನಮ್ಮ ಜೊತೆ ಗಲಾಟೆ ಮಾಡಿರುತ್ತಾರೆ. ಗಲಾಟೆಯಾಗಿದೆ ಎಂದು ಹೇಳಿದ ಸಮಯದಲ್ಲಿ ನನ್ನನ್ನು ಮತ್ತು ಚಾಸಾ 2 ರವರನ್ನು ಹೊರತುಪಡಿಸಿ ಬೇರೆ ಯಾರೂ ಇರಲಿಲ್ಲ. ಸದರಿ ದಿನ ನಾನು ಯಾವ ಬಣ್ಣದ ಅಂಗಿ ಧರಿಸಿದ್ದೆನು ಎಂದು ನನಗೆ ನೆನಪಿಲ್ಲ. ನಾನು ಸದರಿ ದಿನ ಅರಿಶಿಣ ಬಣ್ಣದ ಟೀ ಶರ್ಟ್ ಧರಿಸಿದ್ದೆನು ಎಂದರೆ ಸಾಕ್ಷಿಯು ನನಗೆ ನೆನಪಿಲ್ಲ ಎಂದು ನುಡಿಯುತ್ತಾರೆ. ಸದರಿ ದಿನ ಬಸ್ಸಿನ ಒಳಭಾಗದಲ್ಲಿ ಪ್ರಯಾಣಿಕರು ಇದ್ದರು. ಆರೋಪಿತರು ನಮಗೆ ಬಸ್ಸಿನಿಂದ ಇಳಿದು ಬಂದು ಹಲ್ಲೆ ಮಾಡಿರುತ್ತಾರೆ. ಚಾಸಾ 2 ರವರ ಮುಖಕ್ಕೆ ಮತ್ತು ತಲೆಗೆ ಗಾಯವಾಗಿರುತ್ತದೆ. ಚಾಸಾ 2 ರವರು ಧರಿಸಿದ್ದ ಬಟ್ಟೆಗೆ ರಕ್ತದ ಕಲೆಯಾಗಿರುವುದಿಲ್ಲ. ಗಲಾಟೆಯಾಗಿದೆ ಎಂದು ಹೇಳಿದ ಸಮಯದಲ್ಲಿ ನಾನು ಪೊಲೀಸ್ ಸಹಾಯವಾಣಿಗೆ ಕರೆ ಮಾಡಿರುವುದಿಲ್ಲ. ತಕ್ಷೀರು ಸ್ಥಳದಿಂದ ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ಕೇವಲ 5 ಕಿ.ಮಿ ಅಂತರವಿದ್ದು, ಚಾಸಾ 2 ರವರನ್ನು ಸಕಲೇಶಪುರ ಸರ್ಕಾರಿ ಆಸ್ಪತ್ರೆಗೆ ದಾಖಲು ಮಾಡಲು ತೊಂದರೆ ಇತ್ತಾ ಎಂಬ ಪ್ರಶ್ನೆಗೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿಯುತ್ತಾರೆ. ಮಾರನಹಳ್ಳಿಯಲ್ಲಿರುವ ಪೋಲಿಸ್ ಹೊರಠಾಣೆಗೆ ನಾನು ಮಾಹಿತಿ ನೀಡಿರುವುದಿಲ್ಲ. ನೆಲ್ಯಾಡಿಯಲ್ಲಿರುವ ಆಸ್ಪತ್ರೆಯಲ್ಲಿ ಚಾಸಾ 2 ರವರನ್ನು  ಚಿಕಿತ್ಸೆಗೆ ದಾಖಲು ಮಾಡಿರುವುದಿಲ್ಲ. ಗುಂಡ್ಯದಿಂದ ಬೆಳ್ತಂಗಡಿಗೆ ಹೋಗಲು ಧರ್ಮಸ್ಥಳ-ಉಜಿರೆ ಮಾರ್ಗವಾಗಿ ಹೋಗಬಹುದಾಗಿರುತ್ತದೆ ಎಂದರೆ ಸಾಕ್ಷಿಯು ನನ್ನ ಮನೆಗೆ ಹೋಗಲು ಉಪ್ಪಿನಂಗಡಿಯಿಂದ ಗುರುವಾಯನಕೆರೆ ರಸ್ತೆಯಾಗಿ ಹೋಗಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಚಾಸಾ 2 ರವರನ್ನು ಬೆಳಗ್ಗೆ 7.00 ಗಂಟೆಗೆ ಪ್ರಗತಿ ಆಸ್ಪತ್ರೆಗೆ ದಾಖಲು ಮಾಡಿರುತ್ತೇನೆ. ಪ್ರಗತಿ ಆಸ್ಪತ್ರೆಯಲ್ಲಿ ನಾನೂ ಕೂಡ ಚಿಕಿತ್ಸೆ ಪಡೆದಿರುತ್ತೇನೆ. ಉಪ್ಪಿನಂಗಡಿಯಲ್ಲೂ ಸರ್ಕಾರಿ ಮತ್ತು ಖಾಸಗಿ ಆಸ್ಪತ್ರೆಗಳು ಇರುತ್ತವೆ ಎಂದರೆ ಸರಿ. ಉಪ್ಪಿನಂಗಡಿಯಿಂದ ನಮ್ಮ ಊರಿಗೆ ಹೋಗುವ ಮಾರ್ಗದಲ್ಲಿ ಪುತ್ತೂರು ಆಸ್ಪತ್ರೆ ಸಿಗುವುದಿಲ್ಲ ಎಂದರೆ ಸರಿ. ಉಪ್ಪಿನಂಗಡಿಯಿಂದ ಪುತ್ತೂರಿಗೆ 12 ಕಿ ಮಿ ಅಂತರವಿರುತ್ತದೆ. ಚಾಸಾ 2 ರವರು ಪ್ರಗತಿ ಆಸ್ಪತ್ರೆಯಲ್ಲಿ 3 ದಿನಗಳ ಕಾಲ ಒಳರೋಗಿಯಾಗಿ ದಾಖಲಾಗಿರುತ್ತಾರೆ. ಯಾವ ದಿನಾಂಕ ಚಾಸಾ 2 ರವರು ಆಸ್ಪತ್ರೆಯಿಂದ

ಬಿಡುಗಡೆಯಾಗಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದೂರು ನೀಡುವ ಸಮಯದಲ್ಲಿ ಚಾಸಾ 2 ರವರು ನನ್ನ ಜೊತೆ ಹಾಜರಿರಲಿಲ್ಲ. ದಿಃ 31-03-2025 ರಂದು ದೂರು ನೀಡಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ 1 ದೂರಿನಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ನಿಪಿ 2 ಮಹಜರ್ ನಲ್ಲಿ ಏನು ಬರೆದಿರುತ್ತಾರೆ ಎಂದು ನನಗೆ ಈಗ ನೆನಪಿಲ್ಲ. ಮಹಜರ್ ಕಾಲದಲ್ಲಿ ಚಾಸಾ 3 ಮತ್ತು ನಿಸಾರ್ ರವರು ಹಾಜರಿದ್ದರು. ಮಹಜರ್ ದಿನ ಚಾಸಾ3 ಮತ್ತು ನಿಸಾರ್ ರವರನ್ನು ಹೊರತುಪಡಿಸಿ ಬೇರೆ ಯಾರೂ ಹಾಜರಿರಲಿಲ್ಲ. ಮಹಜರ್ ಪೂರ್ವದಲ್ಲಿ ಪೊಲೀಸರು ನನಗೆ ಯಾವುದೇ ನೋಟೀಸು ನೀಡಿರುವುದಿಲ್ಲ. ನಾನು ಚಿಕಿತ್ಸೆ ಪಡೆದ ಬಗ್ಗೆ ಪೊಲೀಸರಿಗೆ ಮಾಹಿತಿ ನೀಡಿರುತ್ತೇನೆ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ ಹೇ ಕೇ ಸಇ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ , ಸಕಲೇಶಪುರ